# ರತನ್ ಸಿನಿಮಾ ಪ್ರಪಂಚ

**ಸಿನಿಮಾ ನೋಡುವ ಹುಚ್ಚು ಹತ್ತಿಸಿಕೊಂಡಿದ್ದ ರತನ್ ಗಂಗಾಧರ್, ಆ್ಯಡ್ ಫಿಲ್ಮ್‌ಗಳನ್ನು ತಮ್ಮ ಕ್ರಿಯಾಶೀಲತೆಗೆ ವೇದಿಕೆ ಮಾಡಿಕೊಂಡವರು. ಸುಮಾರು ಇನ್ನೂರು ಆ್ಯಡ್ ಫಿಲ್ಮ್‌ಗಳನ್ನು ಮಾಡಿರುವ ಅವರೀಗ ಪೂರ್ಣ ಪ್ರಮಾಣದ ಫೀಚರ್ ಸಿನಿಮಾ ನಿರ್ದೇಶಿಸಿದ್ದಾರೆ.**

■ ಸುಮಲತಾ ಎನ್.





“ಪೆನ್ಸಿಲ್’ ವಸ್ತು ಮಾತ್ರವಲ್ಲ, ಬದುಕಿನ ರೂಪಕ ಕೂಡ ಹೌದು. ಬರೆಯುವುದು, ಗೀಚುವುದು, ಹರಿತಗೊಳಿಸಿ ಮತ್ತಷ್ಟು ಸ್ಫುಟವಾಗಿಸುವುದು, ಕುಗ್ಗುವುದು, ಮುರಿಯುವುದು, ಮತ್ತೆ ಬರೆಯುವುದು – ಒಟ್ಟಿನಲ್ಲಿ ಗುರುತೊಂದನ್ನು ಮೂಡಿಸುವುದು... ಈ ಸೀಸದಕಡ್ಡಿಯನ್ನು ಬದುಕಿನೊಂದಿಗೆ ತಾಳೆ ಹಾಕುವ ಒಂದು ಪುಟ್ಟ ಪ್ರಯತ್ನವನ್ನು ಸಿನಿಮಾ ಮೂಲಕ ಮಾಡಿದ್ದೇನೆ...”

ಜೂನ್ 6ರಂದು ಬಿಡುಗಡೆಯಾಗುತ್ತಿರುವ ‘ಸೀಸ್ ಕಡ್ಡಿ’ ಸಿನಿಮಾ ನಿರ್ದೇಶಕ ರತನ್ ಗಂಗಾಧರ್ ತಮ್ಮ ಚೊಚ್ಚಿಲ ನಿರ್ದೇಶನದ ಸಿನಿಮಾ ಕಥಾಹಂದರವನ್ನು ಹೀಗೆ ಬಿಡಿಸಿಟ್ಟರು.

ಪೆನ್ಸಿಲ್ ಅನ್ನು ರೂಪಕವಾಗಿಟ್ಟುಕೊಂಡು ಮೂಡಿಬರುತ್ತಿರುವ ‘ಸೀಸ್ ಕಡ್ಡಿ’ ತಮ್ಮ ನಿರ್ದೇಶನದ ಮೊದಲ ಸಿನಿಮಾ ಆಗಿದ್ದು, ಹೊಸತನದ ಸೂತ್ರವೊಂದನ್ನು ಇಟ್ಟುಕೊಂಡು ಸಿನಿಮಾ ಕಟ್ಟುವ ಪ್ರಯತ್ನ ಮಾಡಿರುವುದಾಗಿ ಹೇಳಿದ್ದಾರೆ.

ಈ ಮುನ್ನ ಆ್ಯಡ್ ಫಿಲ್ಮ್‌ಗಳನ್ನು ಮಾಡುತ್ತಿದ್ದ ರತನ್ ಅವರಿಗೆ ಜಾಹೀರಾತು ಕ್ಷೇತ್ರ ಸಿನಿಮಾದ ತಾಂತ್ರಿಕ ಅಂಶಗಳನ್ನು ಕಲಿಸಿಕೊಟ್ಟಿತ್ತು. ಆದರೆ ಸಿನಿಮಾ ಕುರಿತ ಆಸಕ್ತಿ ಮಾತ್ರ ಕಾಲೇಜು ದಿನಗಳಲ್ಲೇ ಜೀವ ಪಡೆದಿತ್ತು.

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ರತನ್ ಓದಿದ್ದು ಎಂಜಿನಿಯರಿಂಗ್ ಆದರೂ ಮನಸ್ಸಿದ್ದದ್ದು ಸಿನಿಮಾ ಕಲೆಯೆಡೆಗೆ. ಮೊದಲ ಪಿಯುಸಿ ಓದುವಾಗ ಕಾಲೇಜಿನಲ್ಲಿ ಸಿಕ್ಕಿದ್ದ ನಾಟಕ ತರಬೇತಿ ಅವರಲ್ಲಿ ಕಲೆಯೆಡೆಗೆ ಆಸಕ್ತಿ ತಳೆಯಲು ಪ್ರೇರಣೆಯಾಯಿತು. ಓದಿನೊಂದಿಗೆ ಸಿನಿಮಾಗಳನ್ನು ನೋಡುವ ಅಭ್ಯಾಸವೂ ಜೊತೆಯಾಯಿತು.

ಯಾವುದೇ ಭಾಷೆಯದ್ದಾದರೂ ಸರಿ, ಕುತೂಹಲದಿಂದ ಸಿನಿಮಾ ನೋಡುತ್ತಿದ್ದ ಅವರಲ್ಲಿ ಸಿನಿಮಾ ನಿರ್ದೇಶನದ ಬಗ್ಗೆ ಬೆರಗೊಂದು ತುಂಬಿಕೊಂಡಿತ್ತು.

‘ನಾನು ಓದುತ್ತಿದ್ದ ಕಾಲೇಜಿನಲ್ಲಿ ಪ್ರತಿವರ್ಷ ಹಿರಿಯ ರಂಗಕರ್ಮಿಯೊಬ್ಬರನ್ನು ಕರೆಸಿ ನಾಟಕದ ವರ್ಕ್‌ಶಾಪ್ ಮಾಡಿಸುವ ರೂಢಿಯಿತ್ತು. ಪಿಯುಸಿಯಲ್ಲಿದ್ದಾಗ ಗೋಪಾಲಕೃಷ್ಣ ನಾಯರಿ ಅವರು ತರಬೇತಿ ನೀಡಿದ್ದರು. ಆರು ತಿಂಗಳ ಕಾಲ ಅವರು ನಾಟಕ ಮಾಡಿಸುತ್ತಿದ್ದ ರೀತಿಯನ್ನು ಗಮನಿಸಿದ್ದೆ. ಅವೆಲ್ಲವೂ ನನ್ನಲ್ಲಿ ದಾಖಲಾಗಿದ್ದವು. ಎಂಜಿನಿಯರಿಂಗ್ ಮುಗಿಸಿ ಕೆಲಸಕ್ಕೆ ಸೇರಿದೆ. ಆದರೆ ಅಲ್ಲಿ ಹೆಚ್ಚು ಕಾಲ ಉಳಿಯಲಾಗಲಿಲ್ಲ. ಗೆಳೆಯ ಸಂದೀಪ್ ಪೈ ಕಟ್ಟಿದ್ದ ‘ರಂಗಸಿರಿ’ ತಂಡದಲ್ಲಿ ಆತನ ಕೆಲಸಗಳನ್ನು ಗಮನಿಸಿದ್ದೆ. ಬ್ಯಾಕ್‌ಸ್ಟೇಜ್ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದೆ. ಹೀಗೆ ಒಂದಷ್ಟು ಅನುಭವಗಳು ಸಿನಿಮಾರಂಗಕ್ಕೆ ಬರಬಹುದೆಂಬ ವಿಶ್ವಾಸ ನೀಡಿದವು. ಆದರೆ ಹಲವು ಪ್ರಯತ್ನಗಳು ಕೈಕೊಟ್ಟವು. ಫಿಲ್ಮ್ ಮೇಕಿಂಗ್ ಬಗ್ಗೆ ಕನಸು ಕಂಡಿದ್ದ ನನ್ನ ಹಾದಿ ತೆರೆದುಕೊಂಡಿದ್ದು ಆ್ಯಡ್ ಫಿಲ್ಮ್ ಕ್ಷೇತ್ರದಲ್ಲಿ...’

ಜಾಹೀರಾತು ಕ್ಷೇತ್ರದಲ್ಲಿ ತೊಡಗಿ ಸುಮಾರು 200 ಆ್ಯಡ್‌ಫಿಲ್ಮ್‌ಗಳನ್ನು ಮಾಡಿದ್ದ ರತನ್ ಅವರು ತಾಂತ್ರಿಕತೆ, ಕಂಟೆಂಟ್ ಹೀಗೆ ಪ್ರತಿ ಅಂಶವನ್ನು ಗಮನಿಸುತ್ತಲೇ ಈ ಕ್ಷೇತ್ರದೆಡೆಗೆ ಅನುಭವ ಗಳಿಸಿಕೊಂಡರು. ಆ ಅನುಭವದೊಂದಿಗೆ, ಅವರನ್ನು ಸಿನಿಮಾ ನಿರ್ದೇಶನದತ್ತ ಹೊರಳಿಸಿದ್ದು ಪೌಲ್ ಕೊಯಿಲೊ ಅವರ ಪುಸ್ತಕ. ಆ ಪುಸ್ತಕದಲ್ಲಿ ಪೆನ್ಸಿಲ್ ಅನ್ನು ಬದುಕಿಗೆ ಹೋಲಿಸಿ ಹೆಣೆದಿದ್ದ ಪುಟ್ಟ ಕಥೆ ಅವರಲ್ಲಿ ಸಿನಿಮಾ ಕಥೆಯ ಕನಸು ಮೂಡಿಸಿತು.

‘ಸಣ್ಣ ಕಥೆಯಲ್ಲಿ ಪೆನ್ಸಿಲ್ ಕುರಿತಾಗಿ ಓದಿದ್ದೆ. ಪೆನ್ಸಿಲ್‌ನ ಗುಣಲಕ್ಷಣಗಳನ್ನು ಬಹಳ ಚೆನ್ನಾಗಿ ವಿವರಿಸಲಾಗಿತ್ತು. ನನಗೆ ಆಸಕ್ತಿದಾಯಕ ಅನಿಸಿತ್ತು. ಇದನ್ನು ಬರೆಯೋಣ, ಇದರ ಮೇಲೆ ಕಥೆ ಮಾಡೋಣ ಎಂದು ನಿರ್ದೇಶನದಲ್ಲಿ ಪ್ರಯತ್ನಿಸಿದೆ. ಐದು ಭಾಗಗಳಲ್ಲಿ ಸಿನಿಮಾ ಇದೆ. ಬೆಂಗಳೂರು ಕನ್ನಡ, ಹವ್ಯಕ, ತುಮಕೂರು ಗ್ರಾಮೀಣ, ಮೈಸೂರು ಭಾಷೆಗಳಲ್ಲಿ ಇದೆ. ಹೊಸ ರೀತಿಯಲ್ಲಿ ಸಿನಿಮಾ ಫಾರ್ಮೇಷನ್ ಮಾಡುವ ಕಡೆ ಹೆಚ್ಚು ಗಮನ ನೀಡಿದ್ದೇನೆ. ಸ್ನೇಹಿತರೇ ಸೇರಿ ಈ ಸಿನಿಮಾ ರೂಪಿಸಿದ್ದೇವೆ’ ಎಂದು ವಿವರಿಸುತ್ತಾರೆ.

ಕಂಟೆಂಟ್ ಚೆನ್ನಾಗಿದ್ದರೆ ಸಿನಿಮಾ ಜನರ ಮನಸ್ಸಿನಲ್ಲಿ ಉಳಿಯುತ್ತದೆ ಎಂಬ ನಂಬಿಕೆಯೊಂದಿಗೆ ಸಿನಿಮಾ ರೂಪಿಸಿರುವುದಾಗಿ ಹೇಳುವ ಅವರು, ಥ್ರಿಲ್ಲರ್ ಜಾನರ್‌ನ ಇನ್ನೊಂದು ಹೊಸ ಸಿನಿಮಾವೊಂದನ್ನು ಮಾಡುತ್ತಿದ್ದಾರೆ. ಸಿನಿಮಾ ಖಂಡಿತ ಪ್ರೇಕ್ಷಕರಿಗೆ ಹೊಸ ಅನುಭವ ನೀಡುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ. ■